**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ರವರ ನಿಯಮ, 72ರ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ**

**ಸೂಚನೆ**

ಬೆಂಗಳೂರು ವಿಶ್ವವಿದ್ಯಾಲಯದ ಅಧೀನದಲ್ಲಿದ್ದ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಸೇವಾ ನಿಬಂಧಗಳು ವಿನಿಮಯಗಳಲ್ಲಿ ಮೂಲ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ಯುವಿಸಿಇನಲ್ಲಿ ಕೆಲಸ ಮಾಡುತ್ತಿರುವ ನೌಕರರು ಈ ಮೊದಲಿನಂತೆ ಎಲ್ಲಾ ಸೇವೆ ಮತ್ತು ನಿವೃತ್ತಿ ಪ್ರಯೋಜನಗಳನ್ನು ಪಡೆಯಲು ಅರ್ಹರಿರುತ್ತಾರೆಂದು ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ ಅಧಿನಿಯಮ 2021ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಇದರಂತೆ ಯುವಿಸಿಇ ಕಾಲೇಜಿನ ಎಲ್ಲಾ ವಿಭಾಗಗಳಲ್ಲಿಯು ಹಿರಿಯ ಅಧ್ಯಾಪಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಬೇಕು. ಆದರೆ ಯು.ವಿ.ಸಿ.ಇ ಯಲ್ಲಿ ಬೋರ್ಡ್ ಆಫ್ ಗವರ್ನರ್ಸ್ ಎಂಬ ಒಂದು ಆಡಳಿತ ಮಂಡಳಿಯನ್ನು ಮಾಡಿದ್ದು ಈ ಆಡಳಿತ ಮಂಡಳಿಯು ದೇಶದ ಯಾವ ವಿಶ್ವವಿದ್ಯಾಲಯದಲ್ಲಿಯೂ ಇಲ್ಲದಂತಹ ಹೊಸ ವ್ಯವಸ್ಥೆಯನ್ನು ಪ್ರಾರಂಭಿಸಿ ವಿಭಾಗಗಳ ಮುಖ್ಯಸ್ಥರ ಹುದ್ದೆಯನ್ನು ಆಯಾ ವಿಭಾಗಗಳಿಂದ ಗುಪ್ತ ಮತ್ತು ವೈಯಕ್ತಿಕ ಅಭಿಪ್ರಾಯದ ಮೂಲಕ ವಿಭಾಗದ ಮುಖ್ಯಸ್ಥರನ್ನು ಆಯ್ಕೆ ಮಾಡುವ ಮೂಲಕ ಸುತ್ತೋಲೆಗಳನ್ನು ಹೊರಡಿಸಿದ್ದು ಪ್ರಸ್ತುತ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರ ಹುದ್ದೆಯನ್ನು ಗುಪ್ತ ಮತ್ತು ವೈಯಕ್ತಿಕ ಅಭಿಪ್ರಾಯದ ಮೂಲಕ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು ವಿಶ್ವವಿದ್ಯಾಲಯದ ಕಾಯ್ದೆಯನ್ನು ಉಲ್ಲಂಘಿಸುತ್ತಿರುವ ವಿಷಯವನ್ನು ನಿಯಮ 72 ರಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

**ಉತ್ತರ**

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 48 ಶಾಸನ, 2021, ದಿನಾಂಕ:28.02.2022ರ ಪ್ರಕಾರ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯವು (ಯುವಿಸಿಇ) ಮೂಲ ಬೆಂಗಳೂರು ವಿಶ್ವವಿದ್ಯಾಲಯದಿಂದ ಬೇರ್ಪಟ್ಟು ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ಸೃಜನೆಯಾಗಿದೆ. ಅದರಂತೆ, ಈ ವಿಶ್ವವಿದ್ಯಾಲಯವು ದಿನಾಂಕ:01.04.2023 ರಿಂದ ಅಧಿಕೃತವಾಗಿ ಕಾರ್ಯನಿರ್ವಹಿಸುತ್ತಿದೆ. ಇದನ್ನು ಐಐಟಿ ಹಾಗೂ ಇತರ ರಾಷ್ಟ್ರೀಯ ಮಹತ್ವದ ಸಂಸ್ಥೆಗಳ ಮಾದರಿಯಲ್ಲಿ ಅಭಿವೃದ್ಧಿಗೊಳಿಸಲಾಗುತ್ತಿದೆ.

ಅಧಿನಿಯಮದ ಕಲಂ 3(5)(iv)ರ ಪ್ರಕಾರ ಮೂಲ ವಿಶ್ವವಿದ್ಯಾಲಯದಿಂದ ಈ ವಿಶ್ವವಿದ್ಯಾಲಯಕ್ಕೆ ನಿಯೋಜಿತರಾದ ಎಲ್ಲಾ ಅಧಿಕಾರಿಗಳು ಹಾಗೂ ಉದ್ಯೋಗಿಗಳು ವೇತನ ಸೇರಿದಂತೆ ಎಲ್ಲಾ ಸೌಲಭ್ಯಗಳೊಂದಿಗೆ ಅದೇ ಹುದ್ದೆಗಳಲ್ಲಿ ಮುಂದುವರಿದಿರುತ್ತಾರೆ. ಅಧಿನಿಯಮದ ಕಲಂ 17(5) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಆಡಳಿತ ಮಂಡಳಿಯು ಎರಡು ವರ್ಷಗಳ ಅವಧಿಗಾಗಿ ಅಥವಾ ಆಡಳಿತ ಮಂಡಳಿಯು ಕಾಲ ಕಾಲಕ್ಕೆ ನಿರ್ಧರಿಸಬಹುದಾದಂತ ಅವಧಿಗಾಗಿ ಅಧ್ಯಯನಗಳ ವಿಭಾಗಗಳ ಮುಖ್ಯಸ್ಥರನ್ನು ಹಾಗೂ ಮಂಡಳಿಗಳ ಅಧ್ಯಕ್ಷರನ್ನು ನೇಮಿಸಬಹುದಾಗಿರುತ್ತದೆ.

ಅದರಂತೆ, ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ವಿಭಾಗಗಳ ಮುಖ್ಯಸ್ಥರುಗಳನ್ನು ನೇಮಿಸುವ ನಿಟ್ಟಿನಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದೆ.

1. **ಪೀರ್ ಶಿಫಾರಸ್ಸು**: ಸಂಬಂಧಿತ ಪೀರ್ ಗುಂಪಿನಿಂದ, ಅಂದರೆ, ವಿಭಾಗದ ಮುಖ್ಯಸ್ಥರ ನೇಮಕಾತಿ ಸಂದರ್ಭದಲ್ಲಿ ವಿಭಾಗದ ಎಲ್ಲಾ ಬೋಧಕರ ಅಭಿಪ್ರಾಯದ ಮೇರೆಗೆ ಮತ್ತು ಡೀನ್‌ಗಳ ನೇಮಕಾತಿಯಲ್ಲಿ ಇಡೀ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ/ಸಹ ಪ್ರಾಧ್ಯಾಪಕರ ವೈಯಕ್ತಿಕ ಗೌಪ್ಯ ಸಂವಹನದ ಮೂಲಕ.

2. ಕ್ರಿಯಾತ್ಮಕ ಕೌಶಲ್ಯ / ಪರಿಣತಿ : ಹಿಂದಿನ ದಾಖಲೆಗಳ ಆಧಾರದಲ್ಲಿ.

3. ಔಪಚಾರಿಕ ಸಂವಹನ ಪ್ರಕ್ರಿಯೆಯ ಮೂಲಕ ನಾಯಕತ್ವ ಕೌಶಲ್ಯಗಳು:
   ಎ. ಸಂವಾದವು ನಿರ್ದೇಶಕರ ಅಧ್ಯಕ್ಷತೆಯಲ್ಲಿರುತ್ತದೆ ಮತ್ತು ಆಡಳಿತ ಮಂಡಳಿಯ ಒಬ್ಬ ಸದಸ್ಯರು ಮಂಡಳಿಯಿಂದ ನಾಮ ನಿರ್ದೇಶನಗೊಂಡ ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಯ ಒಬ್ಬ ಬಾಹ್ಯ ವಿಷಯ ತಜ್ಞರನ್ನು ಒಳಗೊಂಡಿರುತ್ತದೆ.

   ಬಿ. ಸಮಿತಿಯು ಅಭ್ಯರ್ಥಿಯ ನಾಯಕತ್ವ ಕೌಶಲ್ಯವನ್ನು ನಿರ್ಣಯಿಸುವುದರ ಜೊತೆಗೆ, ಕ್ರಿಯಾತ್ಮಕ ಕೌಶಲ್ಯಗಳು ಮತ್ತು ಸಹವರ್ತಿ ಶಿಫಾರಸುಗಳ ಆಧಾರದ ಮೇಲೆ ಅಭ್ಯರ್ಥಿಯ ಒಟ್ಟಾರೆ ದೃಷ್ಟಿಕೋನವನ್ನು ಸಹ ತೆಗೆದುಕೊಳ್ಳುತ್ತದೆ.

   ಸಿ. ಸಮಿತಿಯು ಆಡಳಿತ ಮಂಡಳಿಯ ಪರಿಗಣನೆಗೆ ಹೆಸರನ್ನು ಶಿಫಾರಸು ಮಾಡುತ್ತದೆ. ಸೂಕ್ತವೆಂದು ನಿರ್ಣಯಿಸಿದ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳ ಸಂದರ್ಭದಲ್ಲಿ, 2 ಅಭ್ಯರ್ಥಿಗಳ ಹೆಸರನ್ನು ಒಬ್ಬರ ಆಯ್ಕೆಗೆ ಆಡಳಿತ ಮಂಡಳಿಗೆ ಕಳುಹಿಸಲಾಗುತ್ತದೆ. ಅವರುಗಳ ಪೈಕಿ ಒಬ್ಬರನ್ನು ಆಯ್ಕೆ ಮಾಡುವ ಅಧಿಕಾರವನ್ನು ಆಡಳಿತ ಮಂಡಳಿಯು ಹೊಂದಿರುತ್ತದೆ.

ಮೇಲಿನ ಮಾರ್ಗಸೂಚಿಗಳಿಗೆ ಹೋಲುವ ಪದ್ಧತಿಯು ಐಐಟಿ ಹಾಗೂ ಎನ್‌ಐಟಿ ಗಳಲ್ಲಿಯೂ ಸಹ ರೂಢಿಯಲ್ಲಿರುತ್ತದೆ. ಮೇಲ್ಕಂಡ ಮಾನದಂಡಗಳನ್ವಯ ಇತ್ತೀಚೆಗೆ ದಿನಾಂಕ: 10.07.2025 ರಂದು ಡಾ. ಹೆಚ್.ಪ್ರಸನ್ನ ಕುಮಾರ್, ಪ್ರೊಫೆಸರ್ ಇವರನ್ನು ಎಲೆಕ್ಟಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ. ಇದೇ ಮಾನದಂಡವನ್ನು ವಿಶ್ವವಿದ್ಯಾಲಯದ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರನ್ನು ನೇಮಕ ಮಾಡುವ ನಿಟ್ಟಿನಲ್ಲಿ ಅನುಸರಿಸಲಾಗುತ್ತಿದೆ. ವಿಭಾಗಗಳ ಮುಖ್ಯಸ್ಥರ ನೇಮಕಾತಿಯಲ್ಲಿ ವಿಶ್ವವಿದ್ಯಾಲಯವು ಯಾವುದೇ ತಾರತಮ್ಯವನ್ನು ಮಾಡದೇ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ ಅಧಿನಿಯಮ, 2021ರಡಿ ಕಾರ್ಯನಿರ್ವಹಿಸುತ್ತಿದೆ.

**ಸಂಖ್ಯೆ:ಇಡಿ 67 ಟಿಜಿಎಲ್ 2025**

**(ಡಾ|| ಎಂ.ಸಿ.ಸುಧಾಕರ್)**
ಉನ್ನತ ಶಿಕ್ಷಣ ಸಚಿವರು